International Journal of Kannada Research
www.kannadajournal.com

**ISSN: 2454–5813**
IJKR 2018; 4(1): 37-40
© 2018 IJKR
www.kannadajournal.com
Received: 14-11-2017
Accepted: 17-12-207

**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು, ಕರ್ನಾಟಕ, ಭಾರತ

**Correspondence**
**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು, ಕರ್ನಾಟಕ, ಭಾರತ

# ಶಾಸನಗಳ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣ ತಾಲೂಕು ಪ್ರದೇಶದಲ್ಲಿ ಮೈಸೂರು ಸಂಸ್ಥಾನದ ಒಡೆಯರ ಕಾಲದ ಆರ್ಥಿಕತೆ ಕುರಿತ ವಿಮರ್ಶೆ

**ಡಾ. ಎಸ್.ಕೆ.ದೇವೆಗೌಡ**

**DOI:** https://doi.org/10.22271/24545813.2018.v4.i1a.850

**ಪೀಠಿಕೆ**

ಸರಿಸುಮಾರು ಕ್ರಿ.ಶ. 1399 ರಿಂದ 1950ವರೆಗೆ ಹಳೆಯ ಮೈಸೂರು ಸೀಮೆಯನ್ನು ಮೈಸೂರು ಸಂಸ್ಥಾನದ ಒಡೆಯರ ವಂಶದವರು ಕಾಲಾನುಕ್ರಮದಲ್ಲಿ ಆಳಿರುವುದು ಕಂಡುಬರುತ್ತದೆ. ಈ ನೆಲೆಯಿಂದಲೇ ಗ್ರಹಿಸಿದಾಗ; ಘನಚರಿತ್ರೆಯ ಪುಟಗಳಲ್ಲಿ 1ನೇ ರಾಜ ಒಡೆಯರು ಕ್ರಿ.ಶ 1578 ರಿಂದ 1617ರವರೆಗೆ ವಿಜಯನಗರದ ಅರಸರ ಪರಮಾಧಿಕಾರವನ್ನು ಅಲ್ಲಗಳೆದು ಶ್ರೀರಂಗಪಟ್ಟಣದಿಂದ ಸ್ವತಂತ್ರ ಪ್ರಭುವಾಗಿ ಆಳತೊಡಗಿದ ಕಾಲದಿಂದ ಒಡೆಯರ ಅಳೊತ್ತಿನ ಇತಿಹಾಸವನ್ನು ಸ್ಫುಟವಾಗಿ ಗುರುತಿಸುವುದು ಸಾಧ್ಯವಾಗಿದೆ.

ಮೈಸೂರು ಸಂಸ್ಥಾನದ ಒಡೆಯರ ಆಡಳಿತದ ಕಾಲದಲ್ಲಿ ಆರ್ಥಿಕತೆಯ ವ್ಯವಸ್ಥೆಯನ್ನು ತಿಳಿಯಬೇಕಾದರೆ; ಬಹುಮುಖ್ಯವಾಗಿ ಶಾಸನ ಆಧಾರಗಳು ತುಂಬಾನೇ ಅಗತ್ಯವಾಗಿವೆ ಎಂದು ಹೇಳಬಹುದು. ಇದೇ ಶಾಸನಗಳಿಂದ ತಿಳಿಯಲು ಹೊರಟರೆ ಅವುಗಳಿಂದ ವಿಫುಲ ಸಾಮಾಗ್ರಿ ದೊರೆಯುತ್ತವೆ. ಪಿರಿಯಾಪಟ್ಟಣ ತಾಲೋಕು ಪ್ರದೇಶದ ಹಲವು ಗ್ರಾಮದ ಶಾಸನಗಳಿಂದ ಕಂಡುಬಂದಿರುವ ವಿವರಗಳಿಂದ ಮೈಸೂರು ಸಂಸ್ಥಾನದ ಒಡೆಯರ್ ಕಾಲದ ಆರ್ಥಿಕತೆಯ ವ್ಯವಸ್ಥೆಯನ್ನು ಕಟ್ಟಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಪ್ರಧಾನವಾಗಿ ಶಾಸನೋಕ್ತ ವೃತ್ತಿಗಳು, ತೆರಿಗೆಗಳು, ಅಳತೆ, ತೂಕಗಳು, ವರ್ತಕ ಶ್ರೇಣಿಗಳು, ನಾಣ್ಯಗಳು, ಅಧಿಕಾರಿ ವರ್ಗ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಹಾಗೆ ದೊರೆಯುವ ವಿವರಗಳು ಅತ್ಯಂತ ವೈವಿಧ್ಯಮಯವಾಗಿವೆ. ಆ ಸಂಬಂಧಿತವಾಗಿಯೇ ಪ್ರಸ್ತುತ ಅಧ್ಯಯನವು ಈ ಮುಂದಿನಂತೆಯೆ ಸಾಗಿಬಂದಿರುತ್ತದೆ ಎಂದು ಹೇಳಬಹುದು.

ಮೈಸೂರು ಸಂಸ್ಥಾನದ ಒಡೆಯರ್ ಆಡಲಿತದ ಕಾಲಕ್ಕೆ ಹಲವು ದೇವಾಲಯಗಳಿಗೆ ಸಂಪತ್ತುಗಳು ಧಾರಾಳವಾಗಿ ಹರಿದುಬರುತ್ತಿತ್ತು ಎಂಬುದನ್ನು ಶಾಸನಗಳಲ್ಲಿ ಉಲ್ಲೇಖಿತಗೊಂಡಿರುತ್ತದೆ. ಇದೇ ಮೈಸೂರು ಸಂಸ್ಥಾನದ ಒಡೆಯರ್ ತಮ್ಮ ಆಳ್ವಿಕೆಯ ಕಾಲದಲ್ಲಿ ದೇವಾಲಯಗಳು ಶ್ರೀಮಂತ ಸಂಸ್ಥೆಗಳಾಗಿ ಬೆಳೆದು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಚಟುವಟಿಕೆಗಳ ತಾಣಗಳಾಗಿದ್ದವು. ದೇವಾಲಯಗಳಿಗೆ ಭೂಮಿ ಮತ್ತು ಹಣದ ರೂಪದಲ್ಲಿ ಹೇರಳವಾಗಿ ದಾನ ದತ್ತಿಗಳು ದೊರೆಯುತ್ತಿದ್ದವು. ದೇವಾಲಯಗಳು ದಾನಿಗಳಿಂದ ಬಂದ ಆದಾಯದಿಂದ ದೇವಸ್ಥಾನದ ಭಂಡಾರವನ್ನು ಹೆಚ್ಚಿಸಿ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದವು. ಅರಸರು, ಸಾಮಂತರು, ಅಧಿಕಾರಿಗಳು, ವ್ಯಾಪಾರಿಗಳು ಜನಸಾಮಾನ್ಯರಿಂದಲೂ ದತ್ತಿಯನ್ನು ಪಡೆದು ದೇವರ ಪೂಜಾ ಉತ್ಸವಗಳನ್ನು ನಡೆಸಿಕೊಂಡು ಹೋಗುತ್ತಿದ್ದಿತು. ದೇವಸ್ಥಾನಕ್ಕೆ ನಾನಾ ಮೂಲಗಳಿಂದ ಆದಾಯವು ಬರುತ್ತಿದ್ದು, ಅದರಿಂದ ವೆಚ್ಚ ಹಾಗೂ ಇತರ ಸೇವೆಗಳಿಗೆ ಬಳಸಲಾಗುತ್ತಿತ್ತು ಎಂಬುದನ್ನು ತಿಳಿಯಬಹುದಾಗಿದೆ.

**ದೇವಾಲಯಗಳಿಗೆ ಬರುತ್ತಿದ್ದಂತಹ ಆದಾಯಗಳು:** ಆರ್ಥಿಕವಾಗಿ ಮೊದಲಿಗೆ ದೇವಾಲಯದ ಆದಾಯ ಮೂಲಗಳಲ್ಲಿ ಮುಖ್ಯವಾದದ್ದು, ಗ್ರಾಮ ದತ್ತಿ, ದಾನಿಗಳು ದೇವಾಲಯದ ನಿರ್ಮಾಣವನ್ನು ಕೈಗೊಂಡು

ಅದರ ಪೂಜೆ ಸೇವೆಗಳಿಗಾಗಿ ಗ್ರಾಮಗಳನ್ನು ದತ್ತಿಯಾಗಿ ನೀಡುತ್ತಿದ್ದರು. ಅಂತಹ ಗ್ರಾಮಗಳಿಂದ ಬರುವ ಸಕಲ ಆದಾಯ ತೆರಿಗೆ ಸುಂಕಗಳನ್ನು ದೇವಾಲಯಕ್ಕೆ ನೀಡಬೇಕಾಗಿತ್ತು. ಅರಸರು ಗ್ರಾಮಗಳ ಹೆಸರನ್ನು ಪ್ರತಿನಾಮಕರಣ ಮಾಡಿ ಅವುಗಳನ್ನು ದೇವರ ಸೇವೆಗೆ ಕೊಡುತ್ತಿದ್ದರು. ದಾನಿಗಳು ಒಂದು ಗ್ರಾಮವನ್ನಲ್ಲದೆ ಒಂದೇ ದೇವಾಲಯಕ್ಕೆ ಹಲವು ಗ್ರಾಮಗಳನ್ನು ನೀಡುತ್ತಿದ್ದುದುಂಟು. ಒಂದೇ ದೇವಾಲಯಕ್ಕೆ ಹಲವು ಗ್ರಾಮಗಳನ್ನು ದತ್ತಿಯಾಗಿ ನೀಡಿರುವುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಗ್ರಾಮಾದಾಯದಿಂದ ಬರುವ ಆದಾಯವು ದೊಡ್ಡ ಉತ್ಪನ್ನದ ಮೂಲವಾಗಿತ್ತು. ಸರಿಸುಮಾರು ಕ್ರಿ.ಶ. 1607ರ ತಿರುಮಲ ರಾಜ್ಯದೇವನ ಬೆಟ್ಟದಪುರ ಶಾಸನದಲ್ಲಿ ಅನ್ನದಾನಿ ಮಲ್ಲಿಕಾರ್ಜುನ ದೇವರ ಪೂಜೆಗೋಸ್ಕರ ಚಂಗಾಳ್ವರ ಮುಖ್ಯಸ್ಥ ರುದ್ರಗಣ ಮಳಲವಾಡಿ ಸೀಮೆಯನ್ನು ದಾನ ನೀಡಿದ ವಿವರವಿದೆ. ಪಿರಿಯಾಪಟ್ಟಣದ ಚೆನ್ನಿಗರಾಯ ದೇವಸ್ಥಾನದ ಸರಿಸುಮಾರು ಕ್ರಿ.ಶ. 1590ರ ಶಾಸನ ಶ್ರೀಕಂಠರಾಜಯ್ಯನವರ ಕುಮಾರ ಮಾಂಡಾಳೀಕ ಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ ಅರಸ ಶ್ರೀಪಿರಿಯಾ ರಾಜಯ್ಯ ದೇವ ಮಹಾ ಅರಸು ಈ ಪಟ್ಟಣವನ್ನು ಜಿರ್ಣೋದ್ಧಾರ ಮಾಡಿ ತಮ್ಮ ಹೆಸರಿನಲ್ಲಿ ಪಿರಿಯಾರಾಜಪಟ್ಟಣವೆಂದು ಹೆಸರು ಕೊಟ್ಟು ಇಂದಿನಿಂದ ನಮ್ಮ ರಾಜ್ಯದ ದೊರೆಯಾಗಲಿ ಪಕ್ಕದ ರಾಜ್ಯದ ದೊರೆಯಾಗಲಿ 18 ಜಾತಿ 101 ಕುಲದವರೂ ಈ ಶಾಸನದಲ್ಲಿ ಸಿಂಗಪಟ್ಟಣವನ್ನು ಪಿರಿಯಾಪಟ್ಟಣವೆಂಬ ಹೆಸರಿನಿಂದ ಕರೆಯುವಂತೆ ಹೇಳಿದೆ.

ದೇವಾಲಯಗಳಿಗೆ ಭೂಮಿಯನ್ನು ದಾನ ಮಾಡುವುದರ ಮುಖಾಂತರ ಕೃಷಿಯನ್ನು ವಿಸ್ತರಿಸುವ ಪದ್ಧತಿ ಈ ವಲಯದಲ್ಲಿ ಇದ್ದಿತೆಂದು ತಿಳಿದುಬರುತ್ತದೆ. ಈ ವಿಚಾರಕ್ಕೆ ಹಲವಾರು ಉದಾಹರಣೆಗಳನ್ನು ನೀಡಬಹುದಾಗಿದೆ. ಸರಿಸುಮಾರು ಕ್ರಿ.ಶ. 16–17ನೇ ಶತಮಾನದ ಚಿಕ್ಕಮಳಲಿ ಶಾಸನದ ಪ್ರಕಾರ ನಾಡುನಾಯಗಣ್ಣನ ಮಗನಾದ ಕೇತ ಎಂಬಾತನು ಚಿಕ್ಕಮಳಲಿ ಸೀಮೆಯ ಗದ್ದೆಯನ್ನು ದೇವರಿಗೆ ನೀಡಿರುವ ವಿಚಾರ ತಿಳಿದುಬರುತ್ತದೆ. ಈ ಮಾದರಿಯ ಗ್ರಾಮಗಳ ಆಡಳಿತವನ್ನು ಪ್ರಾಯಶಃ ಊರಿನ ಪ್ರಮುಖರಾದ ಗೌಡ ಅಥವಾ ಶಾನುಭೋಗರೇ ನೋಡಿಕೊಳ್ಳುತ್ತಿದ್ದರು ಎಂದು ತಿಳಿಯಬಹುದಾಗಿದೆ ಹಾಗೂ ಶಾಸನ ಪಾಠದಿಂದ ಉಂಬಳಿದಾರರಿಗೆ ಸಲ್ಲಬೇಕಾದ ಹಣ ಮತ್ತು ದವಸ ಧಾನ್ಯವನ್ನು ಪ್ರತಿವರ್ಷ ನೀಡುತ್ತಿದ್ದರೆಂದು ತಿಳಿದುಬರುತ್ತದೆ. ಆದಕಾರಣ ಉಂಬಳಿದಾರರು ಆಯಾ ಗ್ರಾಮಗಳ ಮೇಲೆ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಹೊಂದಿರಲಿಲ್ಲ. ಒಂದು ರೀತಿಯಲ್ಲಿ ಈ ಶಾಸನದಿಂದ ಸಾಂಸ್ಕೃತಿಕವಾಗಿ ಹಾಗೂ ಆರ್ಥಿಕ ಹಿನ್ನೆಲೆಯಲ್ಲಿ ತಿಳಿಯಬಹುದಾಗಿದೆ.

ಸರಿಸುಮಾರು ಕ್ರಿ.ಶ.16ನೇ ಶತಮಾನದ ಬೆಟ್ಟದಪುರ ಶಾಸನದಲ್ಲಿ ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನ ದೇವರಿಗೆ ಇಟಗೈಯ್ಯನೂರ ದಾಸಿನಾಯಕ ಬಂಗಾರ ಬೆಳೆಯುವ ಗ್ರಾಮ ಅರಕಲಗೂಡು ಸೀಮೆ ಮತ್ತು ಸಿರಂಗಾಲವನ್ನು ದಾನ ನೀಡಿರುವ ಕುರಿತು ತಿಳಿದುಬರುತ್ತದೆ. ಕ್ರಿ.ಶ.16ನೇ ಶತಮಾನದಲ್ಲಿ ತುಂಗದ ಆದಿಗೌಡರು ಲಕ್ಕಪ್ಪನಾರಪ್ಪನಿಗೆ ಹೊಲವನ್ನು ದಾನ ಕೊಟ್ಟ ವಿಚಾರವು ಬೆಟ್ಟದತುಂಗ ಶಾಸನ ಪಾಠದಿಂದ ತಿಳಿದುಬರುತ್ತದೆ. ದೇವಾಲಯಗಳ ಪರಂಪರೆಯಲ್ಲಿ ನೋಡುವುದಾದರೆ ದೇವಸ್ಥಾನ, ಬ್ರಹ್ಮದೇಯ, ಮಠಪುರ, ಉಂಬಳಿಯ ಮಾದರಿಯಲ್ಲಿ ಕಾಣಬಹುದಾಗಿದೆ. ಅಂದಿನ ಕಾಲಕ್ಕೆ ದೇವಾಲಯದ ನಿರ್ವಹಣೆಗಾಗಿ ದೇವರ ಪೂಜೆ ಪುನಸ್ಕಾರಕ್ಕಾಗಿ ಭೂದಾನಗಳನ್ನು ನೀಡಿರುವುದು ತಿಳಿದುಬರುತ್ತದೆ. ಉದಾಹರಣೆಗೆ ಬೆಟ್ಟದಪುರ, ಕುಡಕೂರು, ಚಿಕ್ಕಹೊನ್ನೂರು, ಸಂಗರಶೆಟ್ಟಹಳ್ಳಿಗಳಿದ್ದ ದೇವಾಲಯಗಳಿಗೆ ದಾನ ನೀಡಿರುವುದನ್ನು ಕಾಣುತ್ತೇವೆ. ದೇವಾಲಯಗಳ ಕೃಷಿ ವರ್ಗ ಅಂದಿನ ಕಾಲಕ್ಕೆ ಕೃಷಿ ವ್ಯವಸ್ಥೆಯಲ್ಲಿ ಭಾಗಿಯಾಗಿರುವುದು ತಿಳಿದುಬರುತ್ತದೆ. ಬ್ರಾಹ್ಮಣರಿಗೆ ದಾನ ಮಾಡಿದ ಬ್ರಹ್ಮದೇಯಗಳು ಅಥವಾ ಅಗ್ರಹಾರಗಳು ಕೃಷಿಕರವಲ್ಲದ ವರ್ಗದವರು ಭೂಒಡೆತನವನ್ನು ಪಡೆದುಕೊಳ್ಳುವಂತಾಯಿತು. ಅದೇ ಮಾದರಿಯಲ್ಲಿರುವ ಈ ಭಾಗದಲ್ಲಿ ಅಸ್ತಿತ್ವಕ್ಕೆ ಬಂದಿರುವ ಬರದಮರಳ ಸಮಯಾಚಾರದ ಮಠವೂ ಸಹ ಭೂಒಡೆತನವನ್ನು ಪಡೆದುಕೊಂಡಿತ್ತೆಂದು ತಿಳಿದುಬರುತ್ತದೆ. ಕ್ರಿ.ಶ.17ನೇ ಶತಮಾನದ ಶಾಸನದ ಪ್ರಕಾರವಾಗಿ ಇಟಗೈಯ್ಯನೂರ ದಾಸಿನಾಯಕನು ಅನ್ನದಾನಿ ಮಲ್ಲಿಕಾರ್ಜುನ ದೇವರಿಗೆ ಬಂಗಾರ ಬೆಳೆಯುವ ಗ್ರಾಮವಾಗಿರುವ ಅರಕಲಗೂಡು ಮತ್ತು ಸಿರಂಗಾಲ ಗ್ರಾಮಗಳನ್ನೂ ದತ್ತಿ ನೀಡಿದ್ದನೆಂದು ತಿಳಿಸಲಾಗಿದೆ.[11] ದೇವಾಲಯ ಬ್ರಹ್ಮಧೇಯ ಮಠಗಳು ಮತ್ತು ಉಂಬಳಿಗಳನ್ನು ಪಡೆದುಕೊಂಡು ವ್ಯಕ್ತಿಗಳು ಭೂಮಿಯ ಮೇಲಿನ ಹಕ್ಕುಗಳನ್ನು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿದ್ದರು ಎಂಬುದು ಶಾಸನಗಳಲ್ಲಿ ವ್ಯಕ್ತವಾಗುತ್ತದೆ. ಕ್ರಿ.ಶ.15–16ನೇ ಶತಮಾನದ ಶಾಸನದ ಪ್ರಕಾರ ಒಂದು ಸುಂಕದ ಹಂಪರಸ ಎಂಬುವನನ್ನು ತಿಳಿಸುತ್ತದೆ. ಆದರೆ ಈ ಹಳ್ಳಿಗಳಿಂದ ಬರುವಂತಹ ತೆರಿಗೆಯನ್ನು (ಸುಂಕವನ್ನು) ವಸೂಲು ಮಾಡುವಂತಹ ಒಬ್ಬ ಅಧಿಕಾರಿ ಇದ್ದನು. ಈತನು ನಾಲ್ಕು ಗ್ರಾಮಗಳ ತೆರಿಗೆಗಳನ್ನು ಮನ್ನಾ ಮಾಡಿದನು ಎಂದು ಸಹ ಹೇಳಿದೆ. ಕಾರಣ ಅಂದಿನ ಕಾಲಕ್ಕೆ ಬರಗಾಲ ಬಂದಿರಬಹುದು. ಆದುದರಿಂದ ಸುಂಕವನ್ನು ಮನ್ನಾ ಮಾಡಿರಲುಬಹುದು.

ಕ್ರಿ.ಶ.15–16ನೇ ಶತಮಾನದ ಕಾಲಕ್ಕೆ ಪಿರಿಯಾಪಟ್ಟಣ ಪ್ರದೇಶದಲ್ಲಿ ಆರ್ಥಿಕ ವ್ಯವಸ್ಥೆಯನ್ನು ಗಮನಿಸುವುದಾದರೆ ಮೂರು ಜನ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರೆಂದು ತಿಳಿಯಬಹುದಾಗಿದೆ. ಇವರುಗಳು ಯಾರು ಎಂದರೆ ಮಹಾಪ್ರಧಾನರು ಎರಡು ತಂತ್ರಸಾಲ, ಮೂರು ಹೆಗ್ಗಡೆಗಳು ಮಲ್ಲಿನಾಥಪುರದ ಶಾಸನದಲ್ಲಿ ಈ ಅಧಿಕಾರಿಗಳ ಪ್ರಸ್ತಾಪ ತಿಳಿದುಬರುತ್ತದೆ. ಮಹಾಪ್ರಧಾನ ಪಿರಿಯಾಪಟ್ಟಣ ಪ್ರದೇಶದ ಮುಖ್ಯ ಅಧಿಕಾರಿಯಾಗಿದ್ದನು. ತಂತ್ರಸಾಲ ಎಂಬ ಅಧಿಕಾರಿ ಪಿರಿಯಾಪಟ್ಟಣ ಮತ್ತು ಇತರ ಪ್ರದೇಶಗಳೊಂದಿಗೆ ಇರುವಂತಹ ಆರ್ಥಿಕ ಸಂಬಂಧವನ್ನು ನೋಡಿಕೊಳ್ಳುತ್ತಿದ್ದರು. ಅದು ಅಲ್ಲದೆ ಗ್ರಾಮದ ಸಮಸ್ತ ಉಸ್ತುವಾರಿಯನ್ನು ಹೆಗ್ಗಡೆ ಎಂಬ ಅಧಿಕಾರಿಯಾದವರು ನೋಡಿಕೊಳ್ಳುತ್ತಿದ್ದರು. ಅದೇ ರೀತಿ ಸಂಗ್ರಶೆಟ್ಟಿ ಹಳ್ಳಿಯಲ್ಲಿರುವ ಶಾಸನದ ಪ್ರಕಾರ ನೋಡುವುದಾದರೆ, ತಿರುಮಲರಾಯರ ಪ್ರಧಾನ ಪ್ರಚಂಡ ದಂಡ ನಾಯಕನನ್ನು ಹೆಸರಿಸುತ್ತದೆ. ದಂಡನಾಯಕನು ಈ ಪ್ರದೇಶದ ಸಮಸ್ತ ವ್ಯವಹಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದನು. ಆದಕಾರಣ ಆರ್ಥಿಕ ಪ್ರಗತಿಗೆ ಬೇಕಾದ ಕಾರ್ಯಗಳನ್ನು ಸಮರ್ಥವಾಗಿ ಪಾಲಿಸುತ್ತಿದ್ದನು. ಹಳ್ಳಿಯ ಅಧಿಕಾರಿಯಾಗಿದ್ದ ಗೌಡನ ಸ್ಥಾನಮಾನವು ಸಹ ವಂಶಪಾರಂಪರ್ಯವಾಗಿಯೇ ಇರುತ್ತಿತ್ತು ಎಂಬ ವಿಚಾರವು ಜೋಗನಹಳ್ಳಿಯ ಶಾಸನ ಪಾಠದಿಂದ ವ್ಯಕ್ತವಾಗುತ್ತದೆ. ಈ ಶಾಸನದಲ್ಲಿ ವೀರಗೌಡನ ಮಗ ನೂಯಿಗೌಡನು ಅಧಿಕಾರದಲ್ಲಿದ್ದನೆಂದು ತಿಳಿದುಬಂದಿದೆ.

ಹರದೂರು ಗ್ರಾಮದ ಶಾಸನವು ಸುಂಕದ ಭೈರಣ್ಣನನ್ನು ಪ್ರಸ್ತಾಪಿಸುತ್ತದೆ. ಈತನು ಸುಂಕದ ಅಧಿಕಾರಿಯಾಗಿದ್ದನೆಂದು ಹೇಳಿಕೆಗಳಿವೆ. ಅದೇ ಮಾದರಿಯಲ್ಲಿ ಬೆಟ್ಟದಪುರ ಶಾಸನವು ಸೇನಭೋವ ದೇವಪ್ಪಯ್ಯನ ಮಗನಾದ ನಂಜಪ್ಪನನ್ನು ಉಲ್ಲೇಖಿಸುತ್ತದೆ. ಸೇನುಭೋವನು ಗ್ರಾಮದ ಸಮಸ್ತ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುತ್ತಿದ್ದನೆಂದು ಹಾಗೂ ಪ್ರತಿಯೊಂದು ಲೆಕ್ಕಪತ್ರಗಳು ಸಹ ಆತನ ಹತ್ತಿರವೇ ಇರುತ್ತಿದ್ದವು. ಈತನು ರೈತರಿಂದ ಕಂದಾಯವನ್ನು ವಸೂಲಿ ಮಾಡುತ್ತಿದ್ದನು. ಈತನ

ಅಧಿಕಾರವು ಸಹ ವಂಶಪಾರಂಪರ್ಯವಾಗಿತ್ತೆಂದು ತಿಳಿಯಬಹುದಾಗಿದೆ.

**ನೀರಾವರಿ ವ್ಯವಸ್ಥೆ:** ಮೈಸೂರು ಸಂಸ್ಥಾನದ ಒಡೆಯರ್ ಪಿರಿಯಾಪಟ್ಟಣವನ್ನು ಕಂಠೀರವ ನರಸರಾಜ ಒಡೆಯರ್ ಕಾಲದಲ್ಲಿ ವಶಪಡಿಸಿಕೊಂಡರು ಎಂದು ತಿಳಿಯಬಹುದಾಗಿದೆ. ಪಿರಿಯಾಪಟ್ಟಣ ಪ್ರದೇಶದ ನೀರಾವರಿ ವ್ಯವಸ್ಥೆಯನ್ನು ಈ ಭಾಗದಲ್ಲಿ ಕಂಡುಬರುವ ಕೆರೆಗಳಿಂದ ಗಮನಿಸಬಹುದಾಗಿದೆ. ಮೈಸೂರಿನ ಒಡೆಯರ್ ಕಳಲೆ ದಳವಾಯಿಗಳು ಸಹ ಪಿರಿಯಾಪಟ್ಟಣ ಪ್ರದೇಶವು ಸೇರಿದಂತೆ ಮೈಸೂರಿನ ಸಂಸ್ಥಾನದಲ್ಲಿ ನಡೆದಿರುವ ಆರ್ಥಿಕ ಅಭಿವೃದ್ಧಿಯನ್ನು ಈ ಭಾಗದಲ್ಲಿಯೂ ಗಮನಿಸಬಹುದಾಗಿದೆ.

ಮಾನವ ತನ್ನ ವಾಸಕ್ಕಾಗಿ ನೆಲೆ ನಿಂತ ಕ್ಷಣದಿಂದ ಮಳೆಯ ಹೊಳೆಯ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಅವಶ್ಯಕತೆ ಕಂಡುಬಂದಿತು. ಈ ನಿಟ್ಟಿನಲ್ಲಿ ಮುಂದುವರೆದು ತನ್ನ ಅಗತ್ಯಕ್ಕೆ ತಕ್ಕಂತೆ ನಡೆಸಿದ ಪ್ರಯತ್ನಗಳ ಘಟನೆ ಕೆರೆ-ಕಾಲುವೆ ಕುಂಟೆಗಳಾಗಿ ರೂಪು ಪಡೆದವು. ಕೃಷಿ ಅಭಿವೃದ್ಧಿಗೆ ನೀರಾವರಿ ಪೂರಕವಾಗಿದ್ದರೂ ಧಾರ್ಮಿಕ ಮಹೋನ್ನತಿಯೇ ಪ್ರಧಾನ ಆಶಯವಾಗಿ ಕಾರ್ಯನಿರ್ವಹಿಸಿವೆ. ಇಂತಹ ಚಟುವಟಿಕೆಗಳಲ್ಲಿ ಪಾಲ್ಗೊಂಡವರಿಗೆ ಪುಣ್ಯಪ್ರಾಪ್ತಿ ಎಂಬ ಗಾಢವಾದ ನಂಬಿಕೆ ಇದ್ದಿತು. ಕೃಷಿ ಅಭಿವೃದ್ಧಿಯ ಮೂಲಕ ಆರ್ಥಿಕಾಭಿವೃದ್ಧಿಗೆ ನೀರಾವರಿ ಪೂರಕವಾಗಿದ್ದರೂ ಧಾರ್ಮಿಕ ಮಹೋನ್ನತಿಯು ಪ್ರಧಾನ ಆಶಯವಾಗಿ ಕಾರ್ಯ ನಿರ್ವಹಿಸಿದೆ. ಹೀಗಾಗಿ ರಾಜರು, ಸಾಮಂತರು, ಆಡಳಿತಾಧಿಕಾರಿಗಳು, ರಾಣಿಯರು, ವ್ಯಾಪಾರಿಗಳು ಮತ್ತು ವ್ಯಕ್ತಿಗಳು ಗಮನಾರ್ಹ ಪ್ರಮಾಣದಲ್ಲಿ ನೀರಾವರಿ ಕಾಮಗಾರಿಗಳ ನಿರ್ಮಾಣ, ದುರಸ್ತಿ ಹಾಗೂ ನಿರ್ವಹಣೆಯಂತಹ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಇಂತಹ ಚಟುವಟಿಕೆಗಳಲ್ಲಿ ಪಾಲ್ಗೊಂಡವರಿಗೆ ಸಾಮಾಜಿಕ ಹಾಗೂ ರಾಜಕೀಯ ಪ್ರತಿಷ್ಠೆ ದೊರೆಯಿತು. ಪ್ರಸ್ತುತ ಶಾಸನಗಳ ಹಿನ್ನೆಲೆಯಾಗಿಟ್ಟುಕೊಂಡು ಪಿರಿಯಾಪಟ್ಟಣ ತಾಲ್ಲೂಕಿನ ನಾನಾ ಪ್ರದೇಶಗಳಲ್ಲಿರುವ ನೀರಾವರಿ ವ್ಯವಸ್ಥೆಯನ್ನು ನೀಡಲಾಗಿದೆ.

ಅನೇಕ ದಾನ ಶಾಸನಗಳು ಕೆರೆಗಳನ್ನು ಕುರಿತು ಪ್ರಸ್ತಾಪಿಸುವುದರ ಮೂಲಕ ನೀರಾವರಿ ಚೌಕಟ್ಟನ್ನು ಅರ್ಥೈಸಿಕೊಳ್ಳುವುದು ಸಹಾಯಕವಾಗಿದೆ. ಸುಮಾರು 8ನೇ ಶತಮಾನದಿಂದ 20ನೇ ಶತಮಾನದವರೆಗೂ ಶಾಸನಗಳು ಪಾರಂಪರಿಕ ನೀರಾವರಿ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತಿವೆ. ಬಹುತೇಕ ಪ್ರಾಯೋಜಕತ್ವದ ನೆಲೆಯಲ್ಲಿ ಕೆರೆ ನೀರಾವರಿ ಚೌಕಟ್ಟು ನಿರ್ಮಾಣಗೊಂಡು ನಾಲೆ ಹಾಗೂ ನದಿ ಮೂಲಗಳಿಂದ ನೀರಾವರಿ ವಿಸ್ತರಣೆಗೊಂಡಿರುವುದು ತಿಳಿದುಬರುತ್ತದೆ ಹಾಗೂ ಕಂಡುಬರುತ್ತದೆ. ಧಾರ್ಮಿಕ ಮಹೋದ್ದೇಶವೇ ಪ್ರಧಾನವಾಗಿ ಪ್ರೇರಣೆಯಾಗಿ ಕಾರ್ಯ ನಿರ್ವಹಿಸಿರುವುದು ಗಮನಾರ್ಹ. ಪ್ರಭುತ್ವ ಪ್ರಾಯೋಜಕತ್ವಕ್ಕಿಂತ ವೈಯಕ್ತಿಕ ನೆಲೆಯಲ್ಲಿ ಹೆಚ್ಚಿನ ಪ್ರಮಾಣದ ನೀರಾವರಿ ಕಾಮಗಾರಿಗಳು ಅನುಷ್ಠಾನಗೊಂಡಿರುವುದು ಕಂಡುಬರುತ್ತದೆ. ಈ ಪ್ರದೇಶದ ನದಿ ಮತ್ತು ಉಪನದಿಗಳ ನೀರನ್ನು ಕೃಷಿಗೆ ಬಳಸುವುದರಿಂದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಪ್ರದೇಶಗಳು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ರಾಜ ಮಹಾರಾಜರುಗಳ ಆಳ್ವಿಕೆಯಲ್ಲಿ ಪಿರಿಯಾಪಟ್ಟಣ ವಲಯವು ರಾಜಕೀಯ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಸಮಗ್ರವಾದ ಬೆಳವಣಿಗೆಯನ್ನು ಕಾಣುವುದರ ಜೊತೆಗೆ ಆರ್ಥಿಕವಾಗಿಯೂ ಅಭಿವೃದ್ಧಿಗೊಂಡಿತು ಎಂಬುದಕ್ಕೆ ಅಂದಿನ ರಾಜರುಗಳು ಪಿರಿಯಾಪಟ್ಟಣ ವಲಯದ ಆರ್ಥಿಕಾಭಿವೃದ್ಧಿಗೆ ಕೈಗೊಂಡ ನಾನಾ ಅಭಿವೃದ್ಧಿ ಕಾರ್ಯಗಳೇ ಸಾಕ್ಷಿ. ಐತಿಹಾಸಿಕ ದಾಖಲೆಗಳನ್ನು ಅಧರಿಸಿದ ಅಧ್ಯಯನದಿಂದ ಬೆಳಕಿಗೆ ಬರುವ ಸತ್ಯವೇನೆಂದರೆ ಪಿರಿಯಾಪಟ್ಟಣ ಪ್ರದೇಶದ ಪ್ರಮುಖ ಆರ್ಥಿಕ ಚಟುವಟಿಕೆಗಳಲ್ಲಿ ಕೃಷಿಯೇ ಅತ್ಯಂತ ಪ್ರಧಾನವಾಗಿರುವುದು ತಿಳಿದುಬರುತ್ತದೆ.

ಪಿರಿಯಾಪಟ್ಟಣದ ಸುತ್ತಮುತ್ತಲು ಇರುವಂತಹ ಗದ್ದೆ ಹೂತೋಟಗಳನ್ನು ದೇವಪ್ಪ ಕವಿಯು ರಚಿಸಿರುವ ಕ್ರಿ.ಶ.16ನೇ ಶತಮಾನ ರಾಮವಿಜಯ ಎಂಬ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ನೀರಾವರಿಗಾಗಿ ಅಂದಿನ ರಾಜಮಹಾರಾಜರುಗಳು ವಿವಿಧ ನೀರಾವರಿ ಆಕರಗಳನ್ನು ತಿಳಿಸಿದ್ದಾರೆ ಅದರಲ್ಲಿ ಹೊಳೆ, ಕೆರೆ, ಬಾವಿ, ಕೊಳ, ನೀರಿನ ಗುಳಿ, ನೀರಿನ ಹೊಂಡ, ಕಾಲುವೆ, ಹೂವಿನ ಕೊಳ, ಸರೋವರ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ. ಕ್ರಿ.ಶ.16ನೇ ಶತಮಾನದಲ್ಲಿ ನದಿಯ ಇಕ್ಕೆಲಗಳಲ್ಲಿ ಕಾಲುವೆಗಳನ್ನು ನಿರ್ಮಿಸಿ ನದಿಯ ನೀರನ್ನು ಬಳಸಿಕೊಂಡು ಭತ್ತ ಮತ್ತು ಕಬ್ಬನ್ನು ಬೆಳೆಯುತ್ತಿದ್ದರು ಎಂಬುದನ್ನು ದೇವಪ್ಪ ಕವಿಯು ರಾಮವಿಜಯ ಕೃತಿಯಲ್ಲಿ ಸವಿವರವಾಗಿ ಚರ್ಚಿಸಿದ್ದಾರೆ. ಈ ಕಾವ್ಯದ ಪ್ರಕಾರ ನೀರು ತುಂಬಿದ ಗದ್ದೆಗಳು, ಗದ್ದೆಯಲ್ಲಿ ಬೆಳೆದು ನಿಂತ ಭತ್ತದ ತೆನೆಗಳನ್ನು ತಿನ್ನಲು ಬಂದ ಪಕ್ಷಿಗಳನ್ನೇ ಓಡಿಸಲು ಗದ್ದೆಯೊಳಗೆ ಅಟ್ಟಣೆಯನ್ನು ಹಾಕುತ್ತಿದ್ದರು ಎಂದು ತಿಳಿಸಿದ್ದಾರೆ.

ಕ್ರಿ.ಶ.1336ರ ಕಾಲದಲ್ಲಿಯೇ ನೀರಾವರಿ ಸಹಾಯದಿಂದ ಗದ್ದೆಗಳಲ್ಲಿ ಭತ್ತ ಮತ್ತು ಕಬ್ಬನ್ನು ಬೆಳೆಯುತಿದ್ದರೆಂಬುದಕ್ಕೆ ಶಾಸನಗಳ ಉಲ್ಲೇಖಗಳಿವೆ ಹಾಗೂ ಕೆರೆ, ಬಾವಿ ಮತ್ತು ವಿವಿಧ ನೀರಾವರಿ ಆಕರಗಳನ್ನು ನಿರ್ಮಿಸುತ್ತಿದ್ದರೆಂಬುದನ್ನು ತಿಳಿಸಿದ್ದಾರೆ. ವೀರಾಂಬುದಿ ಕೆರೆಯನ್ನು ನೀರದೇವರು ಎಂಬಾತನು ಸನ್ಯಾಸಿಪುರದಲ್ಲಿ ಕ್ರಿ.ಶ.16ನೇ ಶತಮಾನದಲ್ಲಿ ನಿರ್ಮಿಸಿದ್ದಾರೆ. ಕ್ರಿ.ಶ.16ನೇ ಶತಮಾನದಲ್ಲಿ ಚಿಕ್ಕಪುರ ಗ್ರಾಮದಲ್ಲಿ ಸಿಂಗಾರಿ ತೋಟದ ಕೆರೆಯನ್ನು ನಿರ್ಮಿಸಿದ್ದಾರೆ. ಕ್ರಿ.ಶ.16ನೇ ಶತಮಾನದಲ್ಲಿ ಗಳಗನ ಕೆರೆಯಲ್ಲಿ ಗಳಗನ ಕೆರೆಯನ್ನು ನಿರ್ಮಿಸಿದ್ದಾರೆ. ಕ್ರಿ.ಶ.16ನೇ ಶತಮಾನದಲ್ಲಿ ಚಿಕ್ಕಪುರದಲ್ಲಿ ಒಡೆಯ ಎಂಬಾತನು ಸಿಂಗಾರದ ತೊಟದ ಕೆರೆಯನ್ನು ನಿರ್ಮಿಸಿದ್ದಾರೆ. ಕ್ರಿ.ಶ.16ನೇ ಶತಮಾನದಲ್ಲಿ ಬೆಟ್ಟದಪುರದಲ್ಲಿ ಪಿರಿ ಒಡೆಯ ಎಂಬಾತನು ವೀರಾಂಬುಧಿ ಕೆರೆಯನ್ನು ನಿರ್ಮಿಸಿದ್ದಾರೆ. ಕ್ರಿ.ಶ.16-17ನೇ ಶತಮಾನ ಕಾಲಕ್ಕೆ ಕಂಪಲಪುರದಲ್ಲಿ ಮಲ್ಲಣ್ಣಮಗ ನಂಜುಂಡಶೆಟ್ಟಿ ಎಂಬಾತನು ಒಂದು ಗಂಗಾಬಾವಿಯನ್ನು ಕಟ್ಟಿಸಿದನು ಎಂದು ತಿಳಿದುಬರುತ್ತದೆ. ಕ್ರಿ.ಶ.17ನೇ ಶತಮಾನದಲ್ಲಿ ಬೆಟ್ಟದಪುರ ಗ್ರಾಮದಲ್ಲಿ ಸೇನಾಭೋವ ನಂಜಪ್ಪ ಎಂಬಾತನು ಒಂದು ಬಾವಿಯನ್ನು ನಿರ್ಮಿಸಿದ್ದಾನೆ. ಮಳೆಯನ್ನೇ ಅವಲಂಬಿತ ಕೃಷಿ ಪದ್ಧತಿಯಾದರೂ ಬಹಳ ಫಲವತ್ತಾದ ಭೂಮಿಯಿರುವುದರಿಂದ ಹಾಗೂ ಹಲವಾರು ಕೆರೆ ಕಟ್ಟೆಗಳು ರಾಜ ಮಹಾರಾಜರುಗಳು ನಿರ್ಮಿಸಿ ಕೊಟ್ಟಿರುವುದರಿಂದ ನೀರಾವರಿಗೆ ಒಳಪಟ್ಟ ಪ್ರದೇಶಗಳನ್ನು ಕಾಣಬಹುದು. ಕೆರೆಕಟ್ಟೆಗಳನ್ನು ರಾಜ ಮಹಾರಾಜರುಗಳ ಕಾಲದಲ್ಲಿ ನಿರ್ಮಿಸಲ್ಪಟ್ಟಿದ್ದವು ಎನ್ನುವುದಕ್ಕೆ ಇತಿಹಾಸವಿದೆ. ಎಪಿಗ್ರಾಫಿಯ ಕರ್ನಾಟಕ ಮತ್ತು ಪಿರಿಯಾಪಟ್ಟಣ ಕಾಳಗ ಮುಂತಾದ ಕೃತಿಗಳಲ್ಲಿ ರಾಜರುಗಳು ಕೆರೆಗಳನ್ನು ಕಟ್ಟಿಸಿದ ಉಲ್ಲೇಖಗಳಿವೆ. ಉದಾಹರಣೆಗೆ ಪಿರಿಯಾಪಟ್ಟಣದ ಅರಸನಕೆರೆ, ದೊಡ್ಡಕೆರೆ, ಹಿಟ್ನೆಹಳ್ಳಿಯ ಹತ್ತಿರವಿರುವ ಬೊಮ್ಮರಸನ ಕೆರೆ, ಲಿಂಗಾಪುರದ ಗುಂಡ್ಲುಪಟ್ಟಣ ಕೆರೆ ಪಶ್ಚಿಮ ಘಟ್ಟದ ತಪ್ಪಲಿನ ಕೊಡಗಿಗೆ ಹೊಂದಿಕೊಂಡಂತಿರುವ ಪಿರಿಯಾಪಟ್ಟಣ ಪ್ರದೇಶವು ಮಳೆಯು ಅಪರೂಪಕ್ಕೇನು ಬರದೆ ಹೆಚ್ಚು ಮಳೆ ಬೀಳುವಂತಹ ಪ್ರದೇಶವಾಗಿದೆ. ವರ್ಷದ ಬಹುತೇಕ ತಿಂಗಳುಗಳ ಕಾಲ ಮಳೆಬೀಳುವ ತಾಲ್ಲೂಕಾದ ಪಿರಿಯಾಪಟ್ಟಣ ಪ್ರದೇಶದಲ್ಲಿ ಸುಮಾರು 13 ದೊಡ್ಡ ಕೆರೆಗಳು, ಸುಮಾರು 387 ಚಿಕ್ಕ ಕೆರೆಗಳು ಒಟ್ಟು 400 ಕೆರೆಗಳನ್ನು ನಿರ್ಮಿಸಿರುವ ವಿಚಾರ ತಿಳಿದುಬರುತ್ತದೆ. ಭತ್ತ, ಜೋಳ,

ಸಾಮೆ, ಹುರುಳಿ, ಮೊದಲಾದ ಆಹಾರ ಬೆಳೆಗಳು ಎಣ್ಣೆ ಕಾಳುಗಳು, ಹಣ್ಣು, ತರಕಾರಿ, ವೀಳ್ಯದೆಲೆ ಮುಂತಾದವು ಅಂದಿನ ಬೆಳೆಗಳಾಗಿದ್ದವು. ಅವುಗಳಲ್ಲಿ ಭತ್ತ ಮತ್ತು ರಾಗಿ ಮುಖ್ಯ ಆಹಾರ ಬೆಳೆಗಳಾಗಿದ್ದವು. ಭತ್ತದ ಬೆಳೆ ತೆಗೆಯುವಾಗ ಬರಭತ್ತ (ಒಣಬೀಜದ ಭತ್ತ) ಮೊಳೆಭತ್ತ (ಮೊಳಕೆ ಬೀಜ ಬಿತ್ತನೆ) ಮತ್ತು ನಾಟಿ ಪದ್ಧತಿಯ ಮೂರು ವಿಧಾನಗಳನ್ನು ಅನುಸರಿಸಲಾಗುತ್ತಿತ್ತು.

ಪಿರಿಯಾಪಟ್ಟಣದಲ್ಲಿದ್ದ ಸಮೃದ್ಧವಾದ ನೀರಾವರಿ ವ್ಯವಸ್ಥೆಯು ಭತ್ತದ ಬೆಳೆಗೆ ಅನುಕೂಲವಾಗಿತ್ತು. ಅರಸರು (ರಾಜರು) ಶ್ರೀಮಂತರು, ಬ್ರಾಹ್ಮಣರು, ಅಕ್ಕಿಯನ್ನು ಪ್ರಧಾನ ಧಾನ್ಯವನ್ನಾಗಿ ಬಳಸುತ್ತಿದ್ದರೆ, ಸಮಾಜದ ಕೆಳವರ್ಗದವರು ರಾಗಿ ಮತ್ತು ಜೋಳವನ್ನು ವಿಶೇಷವಾಗಿ ಉಪಯೋಗಿಸುತ್ತಿದ್ದರು. ಈ ಭಾಗದಲ್ಲಿ ಎಳ್ಳು, ಹೆಸರುಕಾಳು, ತೊಗರಿ, ಈರುಳ್ಳಿ, ಶುಂಠಿ, ಉದ್ದು, ಕಡಲೆ, ಮೆಣಸು, ಕಬ್ಬು ಮೊದಲಾದವುಗಳ ಬೆಳೆಯನ್ನು ಬೆಳೆಯುತ್ತಿದ್ದರು ಎಂದು ತಿಳಿದುಬರುತ್ತದೆ ಹಾಗೂ ತೆಂಗು ಮತ್ತು ಈಚಲು ಮರದಿಂದ ಹೆಂಡಾವನ್ನು ತಯಾರಿಸುತ್ತಿದ್ದರೆಂದು ತಿಳಿದುಬರುತ್ತದೆ. ಕೃಷಿ ಅಲ್ಲದೆ ಕೃಷಿಯೇತರ ಕಸುಬುಗಳು ಈ ಪ್ರದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖವಾಗಿದ್ದವು. ಅವುಗಳನ್ನು ಇಲ್ಲಿ ಹೆಸರಿಸಬಹುದು. ಹೂವಾಡಿಗರ ವೃತ್ತಿ ಅಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖವಾಗಿತ್ತು. ಹೂವಿನ ತೋಟಗಳ ಪ್ರಸ್ತಾಪ ಶಾಸನಗಳಲ್ಲಿ ಕಂಡುಬಂದಿದೆ. ಆದಕಾರಣ ಹೂಗಳನ್ನು ಬೆಳೆಯುವುದರೊಂದಿಗೆ ಅವುಗಳನ್ನು ಅಂದವಾಗಿ ಹಾರಗಳಾಗಿ ಕಟ್ಟಿ ಮಾರಾಟ ಮಾಡುವುದು ಸಹ ಒಂದು ಕೆಲಸವಾಗಿರುತ್ತದೆ.

ಹೀಗೆ, ಶಾಸನಗಳ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣ ತಾಲೂಕು ಪ್ರದೇಶದಲ್ಲಿ ಮೈಸೂರು ಸಂಸ್ಥಾನದ ಒಡೆಯರ ಕಾಲದ ಆರ್ಥಿಕತೆ ಕುರಿತ ವಿಮರ್ಶೆಯನ್ನು ಮಾಡಲಾಗಿರುತ್ತದೆ ಎಂದು ಹೇಳಬಹುದು.

## ಗ್ರಂಥಸೂಚಿ


1. ಡಾ.ಸಿ.ಎ.ಶ್ರೀಧರ್ – ಮೈಸೂರು ಒಡೆಯರು ಮತ್ತು ಕರ್ನಾಟಕ ಸಂಸ್ಕೃತಿ, ಪ್ರಕಾಶಕರು ಸಂಸ್ಕೃತಿ ಬುಕ್ ಪ್ಯಾರಡೈಸ್, ಮೈಸೂರು, 2010
2. ಡಾ.ಸಿ.ಯು.ಮಂಜುನಾಥ್ – ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, ಕ್ರಿ.ಶ.1150–1340, ಚಿತ್ಕಲಾ ಪ್ರಕಾಶನ, ಕುಪ್ಪಂ, 2012
3. ಡಾ.ಆರ್.ಗೋಪಾಲ್ (ಸಂ) – ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010
4. ಎಪಿಗ್ರಾಫಿಯಾ ಕರ್ನಾಟಿಕ. ಸಂಪುಟ–4 ಪಿರಿಯಾಪಟ್ಟಣ ತಾಲ್ಲೂಕು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974
5. ಡಾ.ಪಿ.ಕೆ.ರಾಜಶೇಖರ್ (ಸಂ) – ಶಿವಸಂಪದ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಶಿವರಾಂಪೇಟೆ, ಮೈಸೂರು, 2012
6. ಬುಕಾನನ್ – ಎ ಜರ್ನಿ ಫ್ರಂ ಮದ್ರಾಸ್ ಥ್ರೂ ಕಂಟ್ರೀಸ್ ಆಫ್ ಮೈಸೂರು ಲಂಡನ್–1807
7. ಎಸ್.ಎಸ್.ಕೃಷ್ಣ ಜೋಯಿಸ – ಮೈಸೂರು ಮಂಗರಸನ ಸೂಪಶಾಸ್ತ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು